ಕುಂದಗೋಳ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಿಸುವುದು

೨೬೦೧. ಶ್ರೀ ಬಿ. ಎ. ಉಪ್ಪಿನ್ (ಕುಂದಗೋಳ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಗೋಳ ತಾಲ್ಲೂಕಿನ ಸಂಪಶಿ ಗ್ರಾಮವು ಹದಿನೈದು ಸಾವಿರ ಜನಸಂಖ್ಯೆಯುಳ್ಳ ಗ್ರಾಮವಾಗಿದ್ದು ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ, ಸರ್ಕಾರವು ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಿಸಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಜಿಲ್ಲಾ ಪರಿಷತ್ತಿನವರು ಈ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲು ಶಿಫಾರಸ್ಸು ಮಾಡಿದಲ್ಲಿ ಪರಿಶೀಲಿಸಲಾಗುವುದು.

ಸರ್ಕಾರಿ ಕಚೇರಿಗಳಲ್ಲಿ ಅರ್ಜಿಗಳ ವಿಲೇವಾರಿ

೨೧೦೨. ಶ್ರೀ ಚಿಕ್ಕಬೋರಯ್ಯ (ಚಾಪಂರಾಜ)—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಯ ಕಛೇರಿಗಳಲ್ಲಿ ಪರಿಶೀಲನೆಗೆ ಬಂದ ಅರ್ಜಿ ಅಥವಾ ಕಡತಗಳ ವಿಲೇವಾರಿಗಾಗಿ ನಿಗಧಿಯಾದ ಕಾಲಾವಧಿ ಎಷ್ಟು ?

ಆ) ಸ್ವಾತಂತ್ರ್ಯ ಪೂರ್ವದಲ್ಲಿದ್ದ ರಾಜರ ಸರ್ಕಾರ ಇಂತಹ ಕಾಲಾವಧಿ ನಿಗಧಿ ಮಾಡಿದ್ದುದನ್ನು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಸದರಿ ಅರ್ಜಿಗಳಲ್ಲಿ ಕಾನೂನು ಬಲವಿಲ್ಲದೆ ಸಕಾರಣಗಳಿಲ್ಲದ ಕಡತಗಳನ್ನು ಇತ್ಯರ್ಥಪಡಿಸುತ್ತಿರುವುದನ್ನು ತಪ್ಪಿಸಲು ಸರ್ಕಾರವು ಕೈಗೊಂಡ ಕ್ರಮವೇನು ?

ಈ) ಹಾಗಿಲ್ಲದಿದ್ದಲ್ಲಿ ಇದು ಭ್ರಷ್ಟಾಚಾರದ ಆಗರವಾಗಲು ಸರ್ಕಾರವೇ ಅವಕಾಶ ಕೊಟ್ಟಂತಾಗುವುದಿಲ್ಲವೆ ?

ಶ್ರೀ ಬಿ. ರಾಚಯ್ಯ (ಮುಖ್ಯಮಂತ್ರಿಗಳು).—

ಅ) ಎಲ್ಲಾ ತರಹೆ ಅರ್ಜಿಗಳನ್ನು, ಕಡತಗಳನ್ನು ವಿಲೇ ಮಾಡಲು ಯಾವುದೇ ಸಮಯ ಮಿತಿಯನ್ನು ನಿಗಧಿ ಮಾಡಿಲ್ಲ.

ಆ) ಹಳೆಯ ಕೈಪಿಡಿಗಳಲ್ಲಿ ಸಚಿವಾಲಯ ಮಟ್ಟದಲ್ಲಿ ಪ್ರತಿಯೊಂದು ಹಂತದಲ್ಲಿ ಪತ್ರಗಳನ್ನು ಒಪ್ಪಿಸುವುದಕ್ಕೆ ಕಾಲಮಿತಿಯನ್ನು ನಿಗಧಿ ಮಾಡಲಾಗಿತ್ತು. ಆದರೆ ಈ ಕೈಪಿಡಿಗಳಲ್ಲಿಯೂ ಸಹ ಅರ್ಜಿಗಳನ್ನಾಗಲಿ ಅಥವಾ ಕಡತಗಳನ್ನಾಗಲಿ ವಿಲೇ ಮಾಡಲು ಯಾವುದೇ ಕಾಲಮಿತಿ ನಿಗದಿ ಮಾಡಿಲ್ಲ.

ಇ) 'ಅ' ಪ್ರಶ್ನೆಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಭ್ರಷ್ಟಾಚಾರ ತಡೆಗಟ್ಟಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ.